# ಮಾವು ಬೇಸಿಗೆಯ ಸಿಹಿ ಸಂಗತಿ

ಬೇಸಿಗೆ ಎಂದರೆ ರಣ ಬಿಸಿಲ ಧಗೆ, ರಜೆ, ಸುತ್ತಾಟ, ದಣಿವು ಮಾತ್ರವಲ್ಲ, ಮಾವಿನ ರುಚಿ ಆಸ್ವಾದಿಸಲೂ ಸಕಾಲ. ಬೇಸಿಗೆಗೂ ಮಾವಿಗೂ ಬಿಡದ ನಂಟು. ನಾಲಿಗೆಗೆ ರುಚಿ ತುಂಬುತ್ತಲೇ ಮನದ ಆಯಾಸ ಕಳೆಯುವ ಮಾವಿನ ಕುರಿತ ಸಿಹಿ ಸಂಗತಿಗಳು ಒಂದೆರಡಲ್ಲ...



ವಿಶ್ವದಲ್ಲೇ ಅತಿ ಹೆಚ್ಚು ಮಾವು ಉತ್ಪಾದಿಸುವ ದೇಶ ಭಾರತ. ನಂತರದ ಸರದಿ ಚೀನಾ ಹಾಗೂ ಥಾಯ್ಲೆಂಡ್‌ನದ್ದು. ಭಾರತದಲ್ಲಿ ವರ್ಷಕ್ಕೆ ಉತ್ಪಾದನೆಯಾಗುವ ಮಾವಿನ ಪ್ರಮಾಣ **200** ಲಕ್ಷ ಟನ್!

**3.435** ಕೆ.ಜಿ. ತೂಕದ ಮಾವು 'ವಿಶ್ವದ ಅತಿ ಹೆಚ್ಚು ತೂಕದ ಮಾವು' ಎಂದು ಗಿನ್ನೆಸ್ ವಿಶ್ವದಾಖಲೆ ಬರೆದಿದೆ. **2009**ರಲ್ಲಿ ಫಿಲಿಪ್ಪೀನ್ಸ್ ಮೂಲದ ಈ ಹಣ್ಣು ದಾಖಲೆ ಬರೆದಿದ್ದು, ಇದು **30.48** ಸೆ.ಮೀ. ಉದ್ದ, **49.53** ಸೆ.ಮೀ. ಸುತ್ತಳತೆ ಹಾಗೂ **17.78** ಸೆ.ಮೀ. ಅಗಲ ದಾಖಲಾಗಿದೆ.

ತನ್ನ ವಿಶಿಷ್ಟ ರುಚಿ, ಪೌಷ್ಟಿಕಾಂಶ, ಸುವಾಸನೆಯ ಕಾರಣವಾಗಿ 'ಹಣ್ಣುಗಳ ರಾಜ' ಎಂದು ಕರೆಸಿಕೊಳ್ಳುವ ಮಾವಿನ ಹಣ್ಣು, ಭಾರತ, ಪಾಕಿಸ್ತಾನ ಹಾಗೂ ಫಿಲಿಪ್ಪೀನ್ಸ್‌ನ 'ರಾಷ್ಟ್ರೀಯ ಹಣ್ಣು' ಕೂಡ ಹೌದು.

ಭಾರತದಲ್ಲಿ ಜುಲೈ **22** ಅನ್ನು 'ರಾಷ್ಟ್ರೀಯ ಮಾವಿನ ಹಣ್ಣಿನ ದಿನ' ಎಂದು ಆಚರಿಸಲಾಗುತ್ತದೆ.

**5000** ವರ್ಷಗಳ ಹಿಂದೆಯೇ ಮಾವಿನ ಹಣ್ಣನ್ನು ಗುರುತಿಸಲಾಗಿತ್ತು. ಭಾರತದ ಈಶಾನ್ಯ ಭಾಗಗಳಲ್ಲಿ, ಮಯನ್ಮಾರ್, ಅಂಡಮಾನ್ ದ್ವೀಪಗಳ ಜನರು ಮಾವಿನ ಹಣ್ಣನ್ನು ಕಂಡುಹಿಡಿದರು.

ಭಾರತದಲ್ಲಿ ಉತ್ತರ ಪ್ರದೇಶ, ಹೆಚ್ಚಿನ ಪ್ರಮಾಣದಲ್ಲಿ ಮಾವಿನ ಹಣ್ಣನ್ನು ಬೆಳೆಯುವ ರಾಜ್ಯವಾಗಿದ್ದು, ದೇಶದ ಒಟ್ಟಾರೆ ಶೇ. **23.47** ಪಾಲು ಹೊಂದಿದೆ.